ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿನ ಎಂಒಯು, ಬೈಲಾ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವ/ಪರಿಷ್ಕರಿಸುವ ನಿಮಿತ್ತ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 09.02.2023ರ ಪೂರ್ವಾಹ್ನ/ಅಪರಾಹ್ನ ಕ್ಕೆ ನಡೆದ ಸಭೆಯಲ್ಲಿ ಹಾಜರಿದ್ದ ಗಣ್ಯರ/ಅಧಿಕಾರಿಗಳ ಹಾಜರಾತಿ.

| ಕ್ರ.ಸಂ | ಹೆಸರು & ಪದನಾಮ<br>ಶ್ರೀ /ಶ್ರೀಮತಿ | ಸಹಿ |
|---|---|---|
| 1 | ಡಾ. ಕೆ.ಸುಧಾಕರ್.,<br>ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ<br>ವೈದ್ಯಕೀಯ ಶಿಕ್ಷಣ ಸಚಿವರು. | |
| 2 | ನವೀನ್‌ರಾಜ್ ಸಿಂಗ್<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ವೈದ್ಯಕೀಯ ಶಿಕ್ಷಣ ಇಲಾಖೆ | |
| 3 | ಡಾ. ಸುಜಾತಾ ರಾಥೋಡ್.ಬಿ.ಎಲ್<br>ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ | |
| 4 | ಡಾ. ಬಿ ಸಿ ರವಿ ಕುಮಾರ್<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | 9/2/2023 |
| 5 | ಆಡಳಿತ ಮಂಡಳಿಯ ಉಳಿದ ಸದಸ್ಯರು Virtual Link ಮೂಲಕ | |
| 6 | | |

**ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿನ ಎಂಒಯು, ಬೈಲಾ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವ/ಪರಿಷ್ಕರಿಸುವ ನಿಮಿತ್ತ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 09.02.2023ರ ಪೂರ್ವಾಹ್ನ/ಅಪರಾಹ್ನ ಕ್ಕೆ ನಡೆದ ಆಡಳಿತ ಮಂಡಳಿ ಸಭೆಯ ನಡವಳಿಗಳು.**

**<u>ಸಭೆಯಲ್ಲಿ ಹಾಜರಿದ್ದ ಗಣ್ಯರು ಹಾಗೂ ಅಧಿಕಾರಿಗಳು:</u>**

ಕಡತ ಸಂ:

ಹಾಜರಾತಿ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

*****

ಸಭೆಗೆ ಆಗಮಿಸಿದ್ದ ಮಾನ್ಯ ಸಚಿವರನ್ನು ಹಾಗೂ ಅಧಿಕಾರಿಗಳನ್ನು ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ ರವರು ಸ್ವಾಗತಿಸುತ್ತಾ, ಸಭೆಯನ್ನು ನಡೆಸಲು ಮಾನ್ಯ ಅಧ್ಯಕ್ಷರನ್ನು ಕೋರಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಕಾರ್ಯನಿರತ 17 ಹಾಗೂ ಹೊಸದಾಗಿ 04 ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳು ಹಾಗೂ 11 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಇದ್ದು, ಈ ಸಂಸ್ಥೆಗಳಲ್ಲಿನ ಬೈಲಾ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬಿನ್ನತೆ ಇರುವುದರಿಂದ ಆಡಳಿತಾತ್ಮಕವಾಗಿ ನಿರ್ಣಯವನ್ನು ಕೈಗೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಆಡಳಿತಾತ್ಮಕ ಉದ್ದೇಶಗಳಿಗಾಗಿ ಪ್ರಸ್ತುತ ಜಾರಿಯಲ್ಲಿರುವ ಸಾಮಾನ್ಯ ನಿಯಮಗಳು ಮತ್ತು ನಿಬಂಧನೆಗಳು, ಬೈಲಾಗಳು, ವೃಂದ ಮತ್ತು ನೇಮಕಾತಿ ನಿಯಮಗಳ ಕುರಿತು ಕಾಲಕಾಲಕ್ಕೆ ವಿವಿಧ ಗೌರವಾನ್ವಿತ ಮಾನ್ಯ ನ್ಯಾಯಾಲಯದ ತೀರ್ಪುಗಳು ಮತ್ತು ಕಾಲಕಾಲಕ್ಕೆ ಸರ್ಕಾರವು ಹೊರಡಿಸಿರುವ ಆದೇಶಗಳನ್ನು ಆಧರಿಸಿ, ಮುಖ್ಯ ತಿದ್ದುಪಡಿಗಳನ್ನು ಮಾಡುವುದು ಅಗತ್ಯವಿರುತ್ತದೆ. ಅಲ್ಲದೇ, ಆರ್ಥಿಕ ಇಲಾಖೆಯು ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರಗಳ ಹಿನ್ನೆಲೆಯಲ್ಲಿ ಮತ್ತು ಏಕಾತ್ಮಕ ನಿರ್ಣಯಗಳನ್ನು ಕೈಗೊಳ್ಳಲು ಹಾಗೂ ಸಂಸ್ಥೆಗಳ ಬಲವರ್ಧನೆಗೆ ಅನುಕೂಲವಾಗುವ ದೃಷ್ಟಿಕೋನದಿಂದ ಬೈಲಾ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಣೆಗೆ ತರುವುದರ ಅಗತ್ಯತೆಯ ಉದ್ದೇಶವನ್ನು ತಿಳಿಸುತ್ತಾ, ಚಾಲ್ತಿಯಲ್ಲಿರುವ ಬೈಲಾ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ತರುವುದರ ಬಗ್ಗೆ ಪ್ರಸ್ತಾಪಿಸಲಾಯಿತು.

ಚಾಲ್ತಿಯಲ್ಲಿರುವ ಬೈಲಾ ಮತ್ತು ಸಿ&ಆರ್ ನಿಯಮಗಳಿಗೆ ತಿದ್ದುಪಡಿಗೊಳಿಸಲು ಉದ್ದೇಶಿಸಿರುವ ಅಂಶಗಳ ಬಗ್ಗೆ ಈಗಾಗಲೇ ಕರಡನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಹಾಗೂ ಕರಡು ಸಿ& ಆರ್ ಮತ್ತು ಬೈಲಾದಲ್ಲಿನ ಅಂಶಗಳ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಿರುವುದನ್ನು ಮತ್ತು ಸ್ವೀಕೃತವಾದ ಆಕ್ಷೇಪಣೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು.

**ಅಜೆಂಡಾ-1:**ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಸಂಸ್ಥೆಯ ಡೀನ್ ಕಮ್ ನಿರ್ದೇಶಕರು ರವರುಗಳು ಸಹಿ ಮಾಡಿ ಸಲ್ಲಿಸಿರುವ ಅಂತಿಮ ಕರಡು MoA(ಮೆಮೋರೆಂಡಮ್ ಆಫ್ ಅಸೋಷಿಯೇಷನ್) ವನ್ನು ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಲಾಯಿತು.

**ನಿರ್ಣಯ:**

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಸಂಸ್ಥೆಯ ಡೀನ್ ಕಮ್ ನಿರ್ದೇಶಕರು ರವರುಗಳು ಸಹಿ ಮಾಡಿ ಸಲ್ಲಿಸಿರುವ MoA ವನ್ನು ಒಮ್ಮತದಿಂದ ಅಳವಡಿಸಿಕೊಳ್ಳಲಾಯಿತು. ಸದರಿ MoA ವನ್ನು ಸಹಕಾರ ಸಂಘಗಳ ಕಛೇರಿಯಲ್ಲಿ ನೋಂದಣಿ ಮಾಡಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.

**ಅಜೆಂಡಾ-2:**

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಸಂಸ್ಥೆಯ ಡೀನ್ ಕಮ್ ನಿರ್ದೇಶಕರು ರವರುಗಳು ಸಹಿ ಮಾಡಿ ಸಲ್ಲಿಸಿರುವ ಅಂತಿಮ ಕರಡು ಬೈಲಾವನ್ನು ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಲಾಯಿತು.

**ನಿರ್ಣಯ:**

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಸಂಸ್ಥೆಯ ಡೀನ್ ಕಮ್ ನಿರ್ದೇಶಕರು ರವರುಗಳು ಸಹಿ ಮಾಡಿ ಸಲ್ಲಿಸಿರುವ ಬೈಲಾವನ್ನು ಒಮ್ಮತದಿಂದ ಅಳವಡಿಸಿಕೊಳ್ಳಲಾಯಿತು. ಸದರಿ ಬೈಲಾವನ್ನು ಸಹಕಾರ ಸಂಘಗಳ ಕಛೇರಿಯಲ್ಲಿ ನೋಂದಣಿ ಮಾಡಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು.

**ಅಜೆಂಡಾ-3:**

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಸಂಸ್ಥೆಯ ಡೀನ್ ಕಮ್ ನಿರ್ದೇಶಕರು ರವರುಗಳು ಸಹಿ ಮಾಡಿ ಸಲ್ಲಿಸಿರುವ ಅಂತಿಮ ಕರಡು ಸಿ & ಆರ್ ನ್ನು ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಲಾಯಿತು.

**ನಿರ್ಣಯ:**

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಸಂಸ್ಥೆಯ ಡೀನ್ ಕಮ್ ನಿರ್ದೇಶಕರು ರವರುಗಳು ಸಹಿ ಮಾಡಿ ಸಲ್ಲಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಒಮ್ಮತದಿಂದ ಅಳವಡಿಸಿಕೊಳ್ಳಲಾಯಿತು.

ಮುಂದುವರೆದು, ಮೇಲಿನಂತೆ ಅಳವಡಿಸಿಕೊಳ್ಳಲಾದ MoA, ಬೈಲಾ ಮತ್ತು ಸಿ&ಆರ್ ನಲ್ಲಿ ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡದಿರುವಂತೆ, ಒಂದು ವೇಳೆ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆಯದೇ ಯಾವುದೇ ಬದಲಾವಣೆಯನ್ನು ಸಂಸ್ಥೆಯ ಹಂತದಲ್ಲಿ ಮಾಡಿಕೊಂಡಲ್ಲಿ, ಸದರಿ ಕ್ರಮವು ಅಸಿಂಧು ಎಂದು ಪರಿಗಣಿಸಲ್ಪಡುತ್ತದೆ ಎಂದು ಸಹ ನಿರ್ಣಯಿಸಲಾಯಿತು.ಅಳವಡಿಸಿಕೊಳ್ಳಲಾದ MoA, ಬೈಲಾ ಮತ್ತು ಸಿ & ಆರ್ ನಿಯಮಗಳು ಈ ತಕ್ಷಣದಿಂದ ಅಂದರೆ ದಿನಾಂಕ : 09.02.2023 ರಿಂದ ಜಾರಿಗೆ ಬರುವಂತೆ ಕಾರ್ಯರೂಪಕ್ಕೆ ಬರುತ್ತವೆ.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

( ಡಾ. ಬಿ ಸಿ ರವಿ ಕುಮಾರ್)
ನಿರ್ದೇಶಕರು ಹಾಗೂ ಡೀನ್
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

(ಡಾ. ಸುಜಾತಾ ರಾಥೋಡ್.ಬಿ.ಎಲ್)
ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

(ನವೀನ್‌ರಾಜ್ ಸಿಂಗ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವೈದ್ಯಕೀಯ ಶಿಕ್ಷಣ ಇಲಾಖೆ

(ಡಾ. ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.